


# ಬಳಸು ಮತ್ತು ಬಿಸಾಕು

**■ ವಸುಮತಿ ಉಡುಪ**

‘ಬಳಸು ಮತ್ತು ಬಿಸಾಕು’ ಇದು ಈ ಕಾಲದ ಘೋಷವಾಕ್ಯ. ಹಾಳಾದ ವಸ್ತುವನ್ನು ರಿಪೇರಿ ಮಾಡಿಸುವ ಕಲ್ಪನೆ ನಮ್ಮ ಜಮಾನದವರ ಪದಕೋಶದಲ್ಲಷ್ಟೇ ಉಳಿದುಕೊಂಡಿದೆ ಎಂದರೆ ಅತಿಶಯೋಕ್ತಿ ಅಲ್ಲ. ‘ಇಂತಿಷ್ಟು ವರ್ಷ ಗ್ಯಾರಂಟಿ ಪೀರಿಯಡ್’ ಎಂದಿದ್ದರೆ ಸರಿಯಾಗಿ ಅಷ್ಟು ವರ್ಷ ಮಾತ್ರ ಬಾಳಿಕೆ ಬರುವಂತೆ ತಯಾರಿಸಿರುತ್ತಾರೆ ಎನ್ನುವುದು ಈಗಿನವರ ಹೇಳಿಕೆ, ನಂಬಿಕೆ.

ಎಲೆಕ್ಟ್ರಾನಿಕ್ಸ್ ವಸ್ತುಗಳ ವಿಷಯದಲ್ಲಿ ಅವರೆಂಥ ನಿಷ್ಠುರರು, ನಿಷ್ಕರುಣಿಗಳು ಎಂದರೆ, ಕೆಟ್ಟು ಹೋಯ್ತು ಅಂದರೆ ಅದನ್ನು ಬಿಸಾಕಿ, ಸಾವಿರಾರು, ಕೆಲವೊಮ್ಮೆ ಲಕ್ಷಗಟ್ಟಲೆ ಖರ್ಚು ಮಾಡಿ ಹೊಸದನ್ನು ಖರೀದಿಸಲು ಹಿಂದೆಮುಂದೆ ನೋಡುವ ಪೈಕಿ ಅಲ್ಲ. ‘ಕೈಲಿ ದುಡ್ಡು ಕುಣಿಯುತ್ತಿರುತ್ತದೆ’ ಎಂದು ಹಳೆತಲೆಗಳಿಗೆ ಅನಿಸಿದರೂ ದುಡ್ಡಿದೆಯೋ, ಬಿಟ್ಟಿದೆಯೋ, ಆ ವಸ್ತು ಅಗತ್ಯ, ಅನಿವಾರ್ಯ ಅನಿಸಿದರೆ ಹೊಸದನ್ನು ಖರೀದಿಸುವುದು ಬುದ್ಧಿವಂತಿಕೆ ಎಂದು ಈಗಿನವರು ನಂಬಿಕೊಂಡುಬಿಟ್ಟಿರುತ್ತಾರೆ.

ಎಲೆಕ್ಟ್ರಾನಿಕ್ಸ್ ವಸ್ತುಗಳ ರಿಪೇರಿ ಅಂಗಡಿಗಳು ಕೊನೆಯುಸಿರೆಳೆಯುತ್ತಿವೆಯೇ ಎಂದರೆ, ಹಾಗೇನೂ ಇಲ್ಲ. ರಿಪೇರಿ ಮಾಡಿಸಲು ನೀವು ಸಿದ್ಧವಿದ್ದರೆ, ಅಂಗಡಿಗಳೂ ಇವೆ. ನನ್ನ ನಂಬಿಕೆಯೋ, ಮನೋಧರ್ಮವೋ ಕಾರಣವಾಗಿ ನಾನು ಪರಿತಪಿಸಿದ ಒಂದೆರಡು ಉದಾಹರಣೆಗಳನ್ನು ಸಹೃದಯರ ಮುಂದೆ ತೆರೆದಿಡುವುದಷ್ಟೇ ನನ್ನ ಉದ್ದೇಶ. ಹಾಗೆಂದು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗುವ ದುರುದ್ದೇಶ ನನ್ನದಲ್ಲ. ಅದು ಸನ್ನಡತೆಯೂ ಅಲ್ಲ.

ಇಪ್ಪತ್ತಿಪ್ಪತ್ತೈದು ಸಾವಿರ ತೆತ್ತು ತಂದಿಟ್ಟುಕೊಂಡಿದ್ದ ನಮ್ಮ ಮನೆಯ ಟೀವಿ ಒಂದು ದಿನ ಹಠಾತ್ತಾಗಿ ಮುಷ್ಕರ ಹೂಡಿತು. ಆಡಿಯೊ ಇದೆ, ವಿಡಿಯೊ ಇಲ್ಲ. ಬರೀ ಚುಕ್ಕೆ ಚುಕ್ಕೆ. ಏನೇ ಆದರೂ ಮಕ್ಕಳನ್ನು ಒಂದು ಮಾತು ಕೇಳಿ ಮುಂದಿನ ಹೆಜ್ಜೆ ಇಡುವುದು ರೂಢಿ. ಅದೊಂದು ಕ್ರಮ ಅಷ್ಟೇ. ಅವರ ಸಲಹೆಯನ್ನು ಕಡ್ಡಾಯವಾಗಿ ಪಾಲಿಸಬೇಕೆಂಬ ನಿಯಮವೇನೂ ಇಲ್ಲ. ಅವರೂ ಅದನ್ನು ನಿರೀಕ್ಷಿಸುವುದಿಲ್ಲ.

‘ಕೊಂಡು ಎಷ್ಟು ವರ್ಷ ಆಯ್ತು?’ ಎನ್ನುವ ಪ್ರಶ್ನೆ ಬಂತು.

‘ಮೂರ್ನಾಲ್ಕು...’

‘ಹೊಸದು ತಗೊಂಡ್ರಾಯ್ತು’ ಅನ್ನುವ ಉಪದೇಶ ಸಿಕ್ಕಿತು. ಛೇ, ಎಲ್ಲೋ ಒಂದು ವೈರು ಲೂಸ್ ಆಗಿರಬಹುದು. ನೈಪುಣ್ಯ ಇರುವವರ ಕೈಗೆ ಸಿಕ್ಕಿದರೆ ಐದ್ಹತ್ತು ನಿಮಿಷದಲ್ಲಿ ರಿಪೇರಿಯಾಗುವಂಥ ಕೇಸಿಗೆ ಹೊಸದಾಗಿ ದುಡ್ಡು ಸುರಿಯಬೇಕೇ? ‘ನೋಡೋಣ’ ಎಂದು ಅರೆಮನಸ್ಸಿಂದ ಹೇಳಿದರೂ ಟೀವಿ ರಿಪೇರಿಯಂಗಡಿಯ ನಂಬರ್ ಹುಡುಕಿ ಫೋನಾಯಿಸಿದೆ. ಮನೆಗೆ ಬಂದಾತ ಟೀವಿಯನ್ನು ಸಂಪೂರ್ಣ ಬಿಚ್ಚಿ ನೋಡಬೇಕೆಂದು ಸಮಜಾಯಿಷಿ ಕೊಟ್ಟು, ಅದಕ್ಕಾಗಿ ಸಮಯ ಬೇಕಾಗುತ್ತದೆಯೆಂದು ಟೀವಿಯನ್ನು ತನ್ನ ಟೂ ವ್ಹೀಲರ್‌ನಲ್ಲಿ ಇರಿಸಿಕೊಂಡು ಹೊರಟುಹೋದ. ಮತ್ತೆಂದೂ ಅವನ ಮುಖದರ್ಶನ ಭಾಗ್ಯ ನನಗೆ ಸಿಗಲಿಲ್ಲ. ಅವನು ಕೊಟ್ಟು ಹೋದ ವಿಸಿಟಿಂಗ್ ಕಾರ್ಡಿನ ನಂಬರಿಗೆ ಫೋನ್ ಮಾಡಿದರೆ ಸಿದ್ಧ ಉತ್ತರ. ಟೀವಿ ರಿಪೇರಿಗೆ ಅಳವಡಿಸಬೇಕಾದ ಹೊಸ ಉಪಕರಣ ಈಗ ಸುಲಭ ಲಭ್ಯವಿಲ್ಲವೆಂದೂ, ಅದಕ್ಕಾಗಿ ಹುಡುಕಾಡುತ್ತಿದ್ದೇನೆಂದೂ, ಸಿಕ್ಕಿದ ತಕ್ಷಣ...

ಕೇಳಿ ಕೇಳಿ ರಗಳೆ ಹಿಡಿಯಿತು. ‘ಬೇಡ ರಿಪೇರಿ. ಹಾಗೇ ವಾಪಸ್ ತಂದುಕೊಡು’ ಎಂದು ದಬಾವಣೆ ಹಾಕುವುದು ಕಷ್ಟವೇನಲ್ಲ. ಏನೋ ಮುಲಾಜು. ಮುಖ ಮುರಿಯುವಂತೆ ಮಾತನಾಡಲಾಗದ ಮನೋಧರ್ಮ. ಅಂಗಡಿಯ ಬಳಿ ಹೋಗೋಣವೆಂದರೆ ಆತ ಸಿಗುತ್ತಾನೋ,